## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುವ ನೊಂದಾಯಿತ ಕಾರ್ಮಿಕರಿಗೆ ಪ್ರಸಕ್ತ ವರ್ಷ ಹಾಗೂ ಮುಂದಿನ ಆರ್ಥಿಕ ಸಾಲಿನ ಬೇಸಿಗೆ ಕಾಲದಲ್ಲಿ ತಾಪಮಾನ ಹೆಚ್ಚಾಗಿರುವುದರಿಂದ, ದುಡಿಯುವ ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ನೀಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 451 ಉಖಾಯೋ 2014 ಬೆಂಗಳೂರು ದಿನಾಂಕ: 10-05-2016
2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 259 ಟಿಎನ್‌ಆರ್ 2016 ದಿನಾಂಕ: 06-10-2016 ಮತ್ತು ಸಮಸಂಖ್ಯೆಯ (ಭಾಗ-1) ದಿನಾಂಕ: 06-10-2016, (ಭಾಗ-1) ದಿನಾಂಕ: 29-10-2016 ಮತ್ತು ದಿನಾಂಕ: 23-01-2017
3. ಸರ್ಕಾರದ ಪತ್ರದ ಸಂಖ್ಯೆ: ಗ್ರಾಅಪ 199 ಉಖಾಯೋ 2016 ದಿನಾಂಕ: 8/21-03-2016
4. ತೆಲಂಗಾಣ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಆರ್‌ಟಿ ಸಂಖ್ಯೆ: 91 ದಿನಾಂಕ: 05-02-2016

~~~~~~

*ಪ್ರಸ್ತಾವನೆ:*

ಓದಲಾದ(2)ರಲ್ಲಿ 2016-17ನೇ ಸಾಲಿನಲ್ಲಿ ರಾಜ್ಯದ 30 ಕಂದಾಯ ಜಿಲ್ಲೆಗಳ 176 ತಾಲ್ಲೂಕುಗಳ ಪೈಕಿ, 160 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ರಾಜ್ಯ ಸರ್ಕಾರವು ಘೋಷಿಸಿದೆ. ಬರಪರಿಸ್ಥಿತಿಯನ್ನು ತಡೆಗಟ್ಟಲು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಓದಲಾದ (4)ರಲ್ಲಿ ತೆಲಂಗಾಣ ಸರ್ಕಾರದವರು ಉಷ್ಣಾಂಶದ ಪ್ರಖರತೆ ಹೆಚ್ಚಾಗಿದ್ದು, ಇದರಿಂದ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರ ಧಣಿವು ಹೆಚ್ಚಾಗಿ ನಿಗಧಿಪಡಿಸಿದ ಕೆಲಸದ ಪ್ರಮಾಣವು ಕಡಿಮೆಯಾಗಿ, ಕೂಲಿ ಸಂದಾಯಗಳಲ್ಲಿ ಕೂಡ ಕಡಿಮೆಯಾಗುತ್ತದೆ ಎಂದು ನಿಗಧಿಪಡಿಸಿದ ಕೆಲಸ ಪ್ರಮಾಣದಲ್ಲಿ ಬೇಸಿಗೆ ಕಾಲದ ಅವಧಿಯ ಮಾಹೆಗಳಿಗೆ ರಿಯಾಯಿತಿಯನ್ನು ಬೇರೆ ಬೇರೆ ಪ್ರಮಾಣದಲ್ಲಿ ಆದೇಶದ ಮೂಲಕ ಹೊರಡಿಸಲಾಗಿರುತ್ತದೆ. ಓದಲಾದ (1)ರಲ್ಲಿ ಇದೇ ಮಾದರಿಯಲ್ಲಿಯೇ ಕಳೆದ ವರ್ಷದ ಬೇಸಿಗೆ ಕಾಲಕ್ಕೆ ರಾಜ್ಯದಲ್ಲಿ 27 ಜಿಲ್ಲೆಗಳ 137 ಬರಪೀಡಿತ ತಾಲ್ಲೂಕು ಪ್ರದೇಶಗಳಿಗೆ ಬೇಸಿಗೆ ಕಾಲದ ರಿಯಾಯಿತಿಯನ್ನು ನೀಡಿ ಆದೇಶವನ್ನು ಹೊರಡಿಸಲಾಗಿತ್ತು. ಪ್ರಸ್ತುತ ಸಾಲಿನಲ್ಲಿ ಬರಗಾಲದ ತೀವ್ರತೆ ಹೆಚ್ಚಾಗಿರುವುದರಿಂದ, ಬಿಸಿಲಿನ ತಾಪ ಮತ್ತು ಉಷ್ಣಾಂಶದ ಪ್ರಖರತೆ ಹೆಚ್ಚಾಗಿರುವುದರಿಂದ, ಬೇಸಿಗೆ ಕಾಲದಲ್ಲಿ ನರೇಗಾ ಯೋಜನೆಯಡಿ ನಿಗಧಿ ಪಡಿಸಿದ ಕಾಮಗಾರಿಗಳ ಕೆಲಸದ ಪ್ರಮಾಣವನ್ನು ನಿರ್ವಹಿಸುವುದು ಕಷ್ಟ ಸಾಧ್ಯವಾಗುತ್ತದೆ. ಇದರಿಂದ, ಕೂಲಿ ಕಾರ್ಮಿಕರಿಗೆ ತಮಗೆ ಧಕ್ಕ ಬೇಕಾದ ಕೂಲಿ ಹಣವು ಕಡಿಮೆಯಾಗುತ್ತದೆ. ಆದುದರಿಂದ, ಕೆಲಸದ ಪ್ರಮಾಣದಲ್ಲಿ ತೆಲಂಗಾಣ ಸರ್ಕಾರದವರು ನೀಡಿದ ಆದೇಶದ ಮಾದರಿಯಲ್ಲೇ ಓದಲಾದ (4)ರಲ್ಲಿ 2016-17ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ನಿಗಧಿಪಡಿಸಿದ ಕೂಲಿದರದ ಅನ್ವಯ ಕೂಲಿ ದರಪಟ್ಟಿಯನ್ನು ನರೇಗಾ ಯೋಜನೆಯ ಕಾಮಗಾರಿಗಳಿಗೆ ಕೆಲಸದ ಪ್ರಮಾಣವನ್ನು ನಿಗಧಿಪಡಿಸಿದ್ದು, ಸದರಿ ಪ್ರಮಾಣಕ್ಕೆ ರಿಯಾಯಿತಿಯನ್ನು ಬೇಸಿಗೆ ಕಾಲದ ಅವಧಿಗಳಿಗೆ ಅಂದರೆ ಮಾರ್ಚ್ ಮಾಹೆಯಲ್ಲಿ ಶೇಕಡಾ 25ರಷ್ಟು, ಏಪ್ರಿಲ್ ಮಾಹೆಯಲ್ಲಿ ಶೇಕಡಾ 30ರಷ್ಟು, ಮೇ ಮಾಹೆಯಲ್ಲಿ ಶೇಕಡಾ 30ರಷ್ಟು ಮತ್ತು ಜೂನ್ ಮಾಹೆಯಲ್ಲಿ ಶೇಕಡಾ 20ರಷ್ಟನ್ನು ರಾಜ್ಯದ 160 ಬರಪೀಡಿತ ತಾಲ್ಲೂಕುಗಳಿಗೆ ನೀಡುವುದಲ್ಲದೇ, ರಿಯಾಯಿತಿಯನ್ನು ಇಡಿ ರಾಜ್ಯದ ಎಲ್ಲಾ
~~~~~~

ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆ ನೀಡಲು ರಾಜ್ಯ ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

*ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 858(1) ಉಖಾಯೋ 2014, ಬೆಂಗಳೂರು ದಿನಾಂಕ: 27-02-2017*

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಓದಲಾದ (4)ರಲ್ಲಿ 2016-17ನೇ ಸಾಲಿನ ಮತ್ತು 2017-18ನೇ ಸಾಲಿನ ಆರ್ಥಿಕ ವರ್ಷಕ್ಕೆ ಕಾಮಗಾರಿಗಳಿಗೆ ನಿಗಧಿಪಡಿಸಿದ ಕೂಲಿದರ ಪಟ್ಟಿಯಂತೆ ಕಾಮಗಾರಿಯ ಕೆಲಸದ ಪ್ರಮಾಣದಲ್ಲಿ ಬೇಸಿಗೆ ಕಾಲದ ಅವಧಿಗಳಿಗೆ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಅನ್ವಯಿಸುವಂತೆ, ಕೆಲಸ ನಿರ್ವಹಿಸುವ ಆಕುಶಲ ಕಾರ್ಮಿಕರಿಗೆ ಈ ಕೆಳಕಂಡ ಶೇಕಡಾ ಪ್ರಮಾಣದಲ್ಲಿ ರಿಯಾಯಿತಿಯನ್ನು ನೀಡಲು ಸರ್ಕಾರವು ಹರ್ಷಿಸಿ ಆದೇಶಿಸಿದೆ.

| *ಕ್ರಮ ಸಂಖ್ಯೆ* | *ಬೇಸಿಗೆ ಕಾಲದ ಅವಧಿ* | *ಕಾಮಗಾರಿಯ ಕೆಲಸದ ಪ್ರಮಾಣದಲ್ಲಿ ನೀಡುವ ಶೇಕಡಾ ರಿಯಾಯಿತಿ* |
|---|---|---|
| 1 | ಮಾರ್ಚ್ 2017 | ಶೇಕಡಾ 25ರಷ್ಟು |
| 2 | ಏಪ್ರಿಲ್ 2017 | ಶೇಕಡಾ 30ರಷ್ಟು |
| 3 | ಮೇ 2017 | ಶೇಕಡಾ 30ಷ್ಟು |
| 4 | ಜೂನ್ 2017 | ಶೇಕಡಾ 20ರಷ್ಟು |

ಈಗ ಹೊರಡಿಸುವ ಆದೇಶವನ್ನು ತತ್‌ಕ್ಷಣವೇ ಜಾರಿಗೊಳಿಸತಕ್ಕದ್ದು. ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

01/03/2017

ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
4. ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
5. ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದಲ್ಲಿ ಇರುವ ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ (ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮೂಲಕ ನೀಡುವುದು.

ಪ್ರತಿಯನ್ನು:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

2. ರಾಜ್ಯದ ಎಲ್ಲಾ ಸನ್ಮಾನ್ಯ ಇಲಾಖೆಗಳ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು
7. ಸರ್ಕಾರದ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಬೆಂಗಳೂರು
8. ಪ್ರಾದೇಶಿಕ ಆಯುಕ್ತರು ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
10. ಎಲ್ಲಾ ಅನುಷ್ಠಾನ ಸಂಸ್ಥೆಗಳ ಮುಖ್ಯಸ್ಥರುಗಳಿಗೆ:
    i. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
    ii. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು,
    iii. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
    iv. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
    v. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್ ರಸ್ತೆ, ಬೆಂಗಳೂರು.
    vi. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಟವರ್, ಬೆಂಗಳೂರು.
    vii. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ಉತ್ತರವಲಯ ಬಿಜಾಪುರ/ದಕ್ಷಿಣವಲಯ, ಕೆ.ಆರ್.ವೃತ್ತ, ಬೆಂಗಳೂರು.
    viii. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಬೆಂಗಳೂರು.
    ix. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
    x. ಆಯುಕ್ತರು ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ, ಗ್ರಾಮೀಣ ನೀರು ಸರಬರಾಜು ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು
11. ಆಯುಕ್ತರು, ಪಶುಸಂಗೋಪನ ಇಲಾಖೆ, ವಿ.ವಿ.ಟವರ್, ಬೆಂಗಳೂರು
12. ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
13. ವಿಶೇಷ ಆಯುಕ್ತರು, ಎಮ್.ಜಿ.ಎನ್.ಆರ್.ಇ.ಜಿ.ಎ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
14. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
15. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
16. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ಗ್ರಾಮೀಣಾಭಿವೃದ್ಧಿಯ ರಾಜ್ಯ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು
17. ಮುಖ್ಯ ಆರ್ಥಿಕ ಸಲಹೆಗಾರು/ಜಂಟಿ ನಿರ್ದೇಶಕರು, ತೋಟಗಾರಿಕೆ/ತಾಂತ್ರಿಕ/ಆಡಳಿತ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
18. ರಾಜ್ಯದ ಎಲ್ಲಾ ಜಿಲ್ಲೆಗಳ ಒಂಬುಡ್ಸ್‌ಮನ್‌ಗಳಿಗೆ
19. ವಿಶೇಷಾಧಿಕಾರಿ, ಗಣಕಕೋಶ, ಗ್ರಾಅಪ ಇಲಾಖೆ. ಇವರು ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
20. ಸಂಪಾದಕರು ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರು ಇದನ್ನು ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.
21. M/s Effia Technologies, ಅವರಿಗೆ www.end2endsolutions.comನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
22. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ